**ದಿನಾಂಕ: 17-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ. ಎನ್ ಆರ್ ವಕೀಲರಿಂದ ಪಿರ್ಯಾದಿಯ ಪರವಾಗಿಃ**

1) ಪಿರ್ಯಾದಿಯ ಮಗ ಮಹೇಶ್ ನನಗೆ 10 ವರ್ಷಗಳಿಂದ ಪರಿಚಯವಿರುತ್ತಾರೆ. ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡುತ್ತಿರುತ್ತೇವೆ ಎಂದು ನುಡಿಯುತ್ತಾರೆ. ಮಹೇಶ್ ಮನೆಗೆ ನೀವು ಆಗಾಗ ಹೋಗುತ್ತಿದ್ದೀರಿ ಎಂದು ಸೂಚಿಸಲಾಗಿ ಸಾಕ್ಷಿ ನಾನು ಹೋಗುತ್ತಿರಲಿಲ್ಲ ಅವರೇ ನಮ್ಮ ಮನೆಗೆ ಆಗಾಗ ಬರುತ್ತಿದ್ದರು ಎಂದು ನುಡಿಯುತ್ತಾರೆ. ಮಹೇಶ್ ಯಾವ ವಿಳಾಸದ ನಿಮ್ಮ ಮನೆಗೆ ಬರುತ್ತಿದ್ದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ಬಂಟೇನಹಳ್ಳಿ ಮನೆಗೆ ಎಂದು ನುಡಿಯುತ್ತಾರೆ. ಬಂಟೇನಹಳ್ಳಿಯಲ್ಲಿ 5 ವರ್ಷಗಳ ಕಾಲ ವಾಸವಿದ್ದೆವು. ಬಂಟೇನಹಳ್ಳಿಯಲ್ಲಿ ಯಾವ ವರ್ಷದಿಂದ ಎಲ್ಲಿಯತನಕ ಇದ್ದೆನು ಎಂದು ನೆನಪಿಲ್ಲ.

2) ಸಂಬಳ ಪಡೆಯುವಾಗ ನಿಮ್ಮ ಇಲಾಖೆಗೆ ಚೆಕ್ ನ್ನು ಕೊಡಬೇಕಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚೆಕ್ ಗೆ ಯಾವಾಗ ಸಹಿ ಮಾಡಿ ಇಟ್ಟೀದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ದಿಃ17-03-2017 ಎಂದು ನುಡಿಯುತ್ತಾರೆ. ಚೆಕ್ ಗೆ ಬೆಳಗ್ಗೆ ಸಹಿ ಹಾಕಿ ಹೋಗಿದ್ದೆ. ಸಂಜೆ ಬಂದು ನೋಡಿದಾಗ ಚೆಕ್ ಇರಲಿಲ್ಲ. ಮನೆಯಲ್ಲಿ ಹೆಂಡತಿ ಇದ್ದಳು. ಮನೆಯಲ್ಲಿ ಚೆಕ್ ಹುಡುಕಿದೆ ಸಿಗಲಿಲ್ಲ. ಚೆಕ್ ಕಾಣದೇ ಇದ್ದ ಬಗ್ಗೆ ಬ್ಯಾಂಕಿಗಾಗಲೀ ಠಾಣೆಗಾಗಲೀ ದೂರು ನೀಡಿಲಿಲ್ಲ.

3) ಕಡೂರಿನಲ್ಲಿ ಎಲ್ಲಿಂದ ಎಲ್ಲಿಯತನಕ ಕೆಲಸ ಮಾಡಿದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. 2022 ನೇ ಸಾಲಿನಲ್ಲಿ ನಾನು ಕಡೂರಿನಲ್ಲಿ ಕೆಲಸ ಮಾಡುತ್ತಿದ್ದೆ ಎನ್ನುವುದು ಸರಿ. ಡಿಪೋನಲ್ಲಿ ಯಾರಿಗಾದರೂ ಕಾಗದ ಪತ್ರಗಳು ಬಂದರೆ ಯಾರು ಪಡೆಯುತ್ತಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಬಾಕ್ಸ್ ಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನೋಟೀಸ್ ಏನಾದರೂ ಬಂದಿದ್ದರೆ ಡಿಪೋದಲ್ಲಿ ಇದ್ದವರು ತಿಳಿಸುತ್ತಾರೆ ಎಂದರೆ ಸರಿ. ನ್ಯಾಯಾಲಯದಿಂದ ನನಗೆ ಯಾವುದೇ ನೋಟೀಸ್ ಬಂದಿರುವುದಿಲ್ಲ.

4) ನಿಪಿ 1 ಚೆಕ್ ನ ಮೇಲೆ ಇರುವ ನಿಪಿ 1(ಎ) ಸಹಿ ನನ್ನದಾಗಿರುತ್ತದೆ. ಪಿರ್ಯಾದಿ ಎಷ್ಟು ವರ್ಷಗಳಿಂದ ಪರಿಚಯ ಎಂದು ಪ್ರಶ್ನಿಸಲಾಗಿ ಸಾಕ್ಷಿ ಅವರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿಯಿಂದ ರೂ.3 ಲಕ್ಷ ಹಣ ಪಡೆದು ಪಿರ್ಯಾದಿಯು ಹಾಸಿಗೆ ಹಿಡಿದಿದ್ದು ಸಾಯುವ ಸ್ತಿತಿಯಲ್ಲಿ ಇರುವ ಕಾರಣ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಹಣ ಪಡೆದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5) ದಿಃ 24-03-2022 ರಂದು ಕಡೂರು ಡಿಪೋದಲ್ಲಿ ಕೆಲಸ ಮಾಡದೇ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಆ ದಿನ ನಾನು ಕೆಲಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಬಂಟೇನಹಳ್ಳಿಯ ವಿಳಾಸಕ್ಕೆ ಮತ್ತು ಕಡೂರಿನ ಡಿಪೋ ವಿಳಾಸಕ್ಕೆ ನೋಟೀಸ್ ಜಾರಿಯಾಗಿದ್ದರೂ, ನೋಟೀಸ್ ಜಾರಿಯಾಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಹಣ ಕೊಡುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .